

ಆರಂಭಿಕ ಕಾಲವಾದ ಒಂದನೆಯ ಶತಮಾನದಷ್ಟು ಹಿಂದೆಯೇ 135 ಕಿಲೋಮೀಟರು ಉದ್ದದ ಆ ಗೋಡೆ ನಿರ್ಮಾಣಗೊಂಡಿತ್ತು. ಆಧುನಿಕ ಕಾಲದಲ್ಲಿ ಇಂಗ್ಲೆಂಡ್ ಮತ್ತು ಸ್ಕಾಟ್ಲೆಂಡ್‌ಗಳ ಗಡಿಯಂತೆಯೂ ಕಾಣುವ ಹ್ಯಾಡ್ರಿಯನ್ ಗೋಡೆಯ ಉತ್ಖನನದಲ್ಲಿ ಜಾನ್ ಕ್ಲೇಟನ್ ಐವತ್ತು ವರ್ಷ ತೊಡಗಿಸಿಕೊಂಡವನು. ಅನಾದಿ ಕಾಲದ ಗೋಡೆಯ ಸುದೀರ್ಘ ಭವಿಷ್ಯದ ಬಗ್ಗೆ ಕಾಳಜಿ ಇದ್ದವನು. ಆ ಗೋಡೆಯ ಕಲ್ಲುಗಳನ್ನು ಅವರಿವರು ಒಂದೊಂದೇ ಜಾರಿಸಿಕೊಂಡುಹೋಗಿ, ಮುಂದೊಂದು ದಿನ ಗೋಡೆಯು ನಶಿಸಿ ಹೋಗುವ ಬಗ್ಗೆ ಅವನಿಗೆ ಆತಂಕ ಇತ್ತು. ಶ್ರೀಮಂತ ಹಿನ್ನೆಲೆಯ ಆತ ಕೆಲವು ಕೋಟೆಗಳ ಜೊತೆಗೆ ಹ್ಯಾಡ್ರಿಯನ್ ಗೋಡೆಯ ಇಪ್ಪತ್ತು ಮೈಲಿ ಉದ್ದದ ಭಾಗದ ವಾರಸುದಾರನೂ ಆಗಿದ್ದ. ಸಹಜವಾಗಿ ಗುಡ್ಡ, ಕಣಿವೆಗಳು ಹತ್ತಿಳಿಯುವ ಆ ಗೋಡೆಯ ಒಂದು ನೈಸರ್ಗಿಕ ತಗ್ಗಿನಲ್ಲಿ ಸಿಕಮೊರ್ ಸಸಿಯನ್ನು ನೆಟ್ಟಿದ್ದ. ಸಸಿ ಬೆಳೆದದ್ದು, ಬಲಗೊಂಡಿದ್ದು, ಜಗತ್ತಿನ ದಿಕ್ಕುದೆಸೆಯ ಪ್ರವಾಸಿಗಳಿಗೆ– ಆಗಂತುಕರಿಗೆ– ಅಭ್ಯಾಗತರಿಗೆ ನಿರ್ಮಲ ಗಳಿಗೆಗಳನ್ನು ಹಂಚಿದ್ದು, ಮತ್ತೆ ಎರಡು ವರ್ಷಗಳ ಹಿಂದೆ ಇಬ್ಬರ ಗರಗಸಕ್ಕೆ ಬಲಿಯಾಗಿ ಹ್ಯಾಡ್ರಿಯನ್ ಗೋಡೆಯ ಮೇಲೆಯೇ ಉರುಳಿ ಬಿದ್ದದ್ದು, ಎಲ್ಲವೂ ಮರವೊಂದರ ದೀರ್ಘ ಇತಿಹಾಸದ ಅನಿರೀಕ್ಷಿತ ಹಾಗೂ ಇತ್ತೀಚಿನ ಮುಂದುವರಿಕೆ.

2023ರ ಸೆಪ್ಟೆಂಬರ್ 28ರ ಬೆಳಗ್ಗೆ, ಬಿದ್ದಿದ್ದ ಮರವನ್ನು ನೋಡಿದ ಸ್ಥಳೀಯರು ಆರಕ್ಷಕರಿಗೆ ದೂರು ಕೊಟ್ಟಿದ್ದರು. ಸಣ್ಣ ಸಣ್ಣ ಇತಿಹಾಸ, ಕಥೆ, ದಂತಕಥೆಗಳನ್ನೂ ಗೌರವಯುತವಾಗಿ ಸ್ಮರಿಸುವ, ಆರೈಕೆ ಮಾಡಿ ಕಾಯ್ದಿಟ್ಟು ಮತ್ತೆ ಪ್ರವಾಸಿಗರಿಗೂ ಆಸ್ಥೆಯಿಂದ ತೋರಿಸಿ ಹೆಮ್ಮೆಪಡುವ ಸಂಸ್ಕೃತಿಯ ಇಂಗ್ಲೆಂಡ್‌ನಲ್ಲಿ, ಜಗತ್ಪ್ರಸಿದ್ಧ ಮರ ಉರುಳಿದ್ದು 'ಹೈ ಪ್ರೊಫೈಲ್ ಕೇಸ್' ಆಗಿತ್ತು. ಮತ್ತೆ ಅಪರೂಪದ್ದೂ. ತನಿಖೆಯಲ್ಲಿ ಭಾಗವಹಿಸಿದ ವಿಧಿವಿಜ್ಞಾನ ತಂಡದ ಅಧಿಕಾರಿ ಹೇಳುವಂತೆ, 'ನನ್ನ ಮೂವತ್ತೊಂದು ವರ್ಷಗಳ ಸೇವೆಯಲ್ಲಿ ಅಪರಾಧದ ಕುರುಹಿಗಾಗಿ ಮರವೊಂದರ ಪರೀಕ್ಷೆಯನ್ನು ಹಿಂದೆಂದೂ ಮಾಡಿದ್ದಿಲ್ಲ'. ತನಿಖೆ ಮುಂದುವರಿದು, ಸುಳಿವು ದೊರೆತು, 2024ರ ಏಪ್ರಿಲ್‌ನಲ್ಲಿ ಡೇನಿಯಲ್ ಮತ್ತು ಆಡಮ್ ಎನ್ನುವ ಕಂಬ್ರಿಯದ ನಿವಾಸಿಗಳನ್ನು ಐತಿಹಾಸಿಕ ಮರವನ್ನು ಕಡಿದ ಹಾಗೂ ಮರವನ್ನು ಬೀಳಿಸಿ ಚಾರಿತ್ರಿಕ ಹ್ಯಾಡ್ರಿಯನ್ ಕಲ್ಲುಗೋಡೆಗೆ ಹಾನಿ ಮಾಡಿದ ಕ್ರಿಮಿನಲ್ ಆರೋಪದಲ್ಲಿ ವಿಚಾರಣೆಗೆ ಒಳಪಡಿಸಲಾಯಿತು.